



ಸ್ವಂತದವರು

'ನಾನು' ಮತ್ತು 'ನನ್ನದು'. 'ಹೇ ಭಗವಂತ, ನೀನೇ ಎಲ್ಲದರ ಕರ್ತೃ. ನೀನೊಬ್ಬನೆ ನಮ್ಮ ಆಪ್ತಬಂಧು. ಈ ಮನೆ, ಮಠ, ಪರಿವಾರ, ಬಾಂಧವರು, ಬಂಧುಗಳು. ಈ ಇಡೀ ಜಗತ್ತು ಎಲ್ಲವೂ ನಿನಗೆ ಸೇರಿದ್ದು'—ಇದಕ್ಕೆ ಸರಿಯಾದ ಜ್ಞಾನ ಅಂತ ಹೆಸರು. ಅದಕ್ಕೆ ಬದಲು, 'ನಾನೆ ಎಲ್ಲವನ್ನು ಮಾಡುತ್ತಿದ್ದೇನೆ; ನಾನು ಕರ್ತ; ಮನೆ, ಮಠ, ಪರಿವಾರ, ಮಕ್ಕಳು–ಮರಿಗಳು, ಬಂಧುಗಳು, ಆಸ್ತಿಪಾಸ್ತಿ ಇವೆಲ್ಲ ನನಗೆ ಸೇರಿದ್ದು'—ಇದು ಅಜ್ಞಾನ.

ಒಮ್ಮೆ ಗುರು ಈ ವಿಷಯವನ್ನೆಲ್ಲ ಶಿಷ್ಯನಿಗೆ ತಿಳಿಸುತ್ತಿದ್ದ. ಗುರು ಹೇಳಿದ: "ಭಗವಂತನೊಬ್ಬನೆ ನಿನ್ನ ಸ್ವಂತದವ. ಬೇರೆ ಯಾರೂ ಸ್ವಂತದವರಲ್ಲ" ಎಂದು. ಶಿಷ್ಯ ಹೇಳಿದ: "ಒಳ್ಳೇದು. ಆದರೆ ನನ್ನ ತಾಯಿ, ಹೆಂಡತಿ ಇವರೆಲ್ಲ ನನ್ನನ್ನು ಬಹಳ ಅಕ್ಕರೆಯಿಂದ ನೋಡುತ್ತಾರೆ. ... ಶಿಷ್ಯನ ಮಾತನ್ನು ಕೇಳಿ ಗುರು ಹೇಳಿದ: "ಅದೆಲ್ಲ ನಿನ್ನ ಮಾನಸಿಕ ಭ್ರಾಂತಿ. ಯಾರೂ ನಿನ್ನ ಸ್ವಂತದವರಲ್ಲ ಎಂಬುದನ್ನು ನಿನಗೆ ತೋರಿಸಿಕೊಡುತ್ತೇನೆ. ಈ ಕೆಲವು ಔಷಧದ ಗುಳಿಗೆಗಳನ್ನು ನಿನ್ನ ಹತ್ತಿರ ಇಟ್ಟುಕೊ. ಮನೆಗೆ ಹೋಗಿ ಅವನ್ನು ನುಂಗಿ ಮಲಗಿಕೊ. ಜನರಿಗೆ ನೀನು ಸತ್ತುಹೋಗಿಬಿಟ್ಟಿದ್ದೀಯೆ ಅಂತ ಭಾವನೆಯಾಗುತ್ತದೆ. ಆದರೆ ನಿನಗೆ ಬಾಹ್ಯ ಜ್ಞಾನವಿರುತ್ತದೆ; ಸತ್ತಂತೆ ಇದ್ದರೂ ನೋಡಲು, ಕೇಳಲು ಸಾಧ್ಯವಾಗುತ್ತದೆ. ಆ ಸಮಯಕ್ಕೆ ಸರಿಯಾಗಿ ನಾನು ನಿನ್ನ ಮನೆಗೆ ಬರುತ್ತೇನೆ."

ಶಿಷ್ಯ ಹಾಗೆಯೆ ಮಾಡಿದ. ಮನೆಗೆ ಹೋಗಿ ಆ ಗುಳಿಗೆಗಳನ್ನು ತಿಂದ ಬಳಿಕ ಅಚೇತನನಾಗಿ ಹಾಸಿಗೆ ಮೇಲೆ ಬಿದ್ದಿದ್ದ. ತಾಯಿ, ಹೆಂಡತಿ ಎಲ್ಲರೂ ಗೋಳಾಡಲಾರಂಭಿಸಿದರು. ಆ ಸಮಯಕ್ಕೆ ಸರಿಯಾಗಿ ಗುರು ವೈದ್ಯನ ವೇಷ ಹಾಕಿಕೊಂಡು, ಆ ಮನೆಗೆ ಬಂದ. ಎಲ್ಲವನ್ನೂ ಕೇಳಿ, ಹೇಳಿದ: "ಒಳ್ಳೇದು. ಇದಕ್ಕೊಂದು ಔಷಧವಿದೆ—ಮತ್ತೆ ಇವನು ಬದುಕಿ ಏಳುತ್ತಾನೆ. ಆದರೆ ಒಂದು ವಿಷಯ. ಈ ಔಷಧವನ್ನು ಮೊದಲು ಆತನ ಸ್ವಂತದವರೊಬ್ಬರು ತಿನ್ನಬೇಕು. ಬಳಿಕ ಆತನಿಗೆ ಕೊಡಲಾಗುತ್ತದೆ. ಆತನ ಸ್ವಂತದವರು ಯಾರು ಈ ಗುಳಿಗೆಯನ್ನು ತಿನ್ನುತ್ತಾರೊ, ಅವರು ಮಾತ್ರ ಸತ್ತುಹೋಗುತ್ತಾರೆ. ..... ನೋಡಿ, ಹಾಗೆ ಮಾಡುವುದಾದರೆ ಆತ ಬದುಕಿ ಏಳುತ್ತಾನೆ."

ಶಿಷ್ಯ ಎಲ್ಲವನ್ನೂ ಕೇಳಿಸಿಕೊಳ್ಳುತ್ತಿದ್ದಾನೆ. ಪಂಡಿತ ಮೊದಲು ತಾಯಿಯನ್ನು ಕರೆದ. ಪಂಡಿತ ಆಕೆಗೆ ಹೇಳಿದ: "ಅಮ್ಮ, ನೀವಿನ್ನು ಅಳಬೇಕಾಗಿಲ್ಲ, ನೀವು ಈ ಔಷಧವನ್ನು ತೆಗೆದುಕೊಳ್ಳಿ. ನಿಸ್ಸಂದೇಹವಾಗಿ ನಿನ್ನ ಮಗ ಬದುಕಿ ಏಳುತ್ತಾನೆ. ಆದರೆ ನೀವು ಮಾತ್ರ ಸಾಯುತ್ತೀರಿ." ತಾಯಿ ಔಷಧವನ್ನು ಕೈಗೆ ತೆಗೆದುಕೊಂಡು ಬಹಳವಾಗಿ ಯೋಚಿಸಿ ಚಿಂತೆಯಿಂದ ಅಳುತ್ತ ಹೇಳಿದಳು: "ಅಪ್ಪಾ, ನನಗೆ ಇನ್ನೂ ಕೆಲವು ಗಂಡು, ಹೆಣ್ಣು ಮಕ್ಕಳಿದ್ದಾರೆ. ನಾನು ಸತ್ತುಹೋದರೆ ಅವರಿಗೆ ಏನಾಗಿ ಬಿಡುತ್ತದೊ ಏನೊ. ಆ ವಿಷಯವಾಗಿ ನಾನು ಯೋಚಿಸುತ್ತಿದ್ದೇನೆ... "

ಅನಂತರ ಪಂಡಿತನು ಶಿಷ್ಯನ ಹೆಂಡತಿಯನ್ನು ಕರೆದು ಆಕೆಯ ಕೈಗೆ ಔಷಧವನ್ನು ಕೊಟ್ಟ. ಔಷಧವನ್ನು ಕೈಗೆ ತೆಗೆದುಕೊಂಡು ಆಕೆಯೂ ಯೋಚಿಸಲಾರಂಭಿಸಿದಳು. ಅಳುತ್ತಾ ಹೇಳಲಾರಂಭಿಸಿದಳು: "ಅಯ್ಯೋ! ಅವರ ಹಣೆಯಲ್ಲಿ ಏನು ಬರೆದಿತ್ತೊ ಅದು ಆಗಿಹೋಯಿತು. ಈಗ ಈ ಎಳೆಯ ಮಕ್ಕಳ ಗತಿಯೇನು ಹೇಳಿ? ಇವರನ್ನು ಬೆಳೆಸುವವರು ಯಾರು ತಾನೆ ಇದ್ದಾರೆ? ನಾನು ಔಷಧವನ್ನು ಹೇಗೆ ತಾನೆ ತೆಗೆದುಕೊಳ್ಳಲಿ?" ಅಷ್ಟರಲ್ಲಿ ಆ ಶಿಷ್ಯನ ಔಷಧದ ಅಮಲು ಇಳಿದುಹೋಯಿತು. ಈಗ ಅವನಿಗೆ ಯಾರೂ ತನ್ನ ಸ್ವಂತದವರಲ್ಲ ಎಂಬುದು ಚೆನ್ನಾಗಿ ಮನದಟ್ಟಾಯಿತು. ದಡಗುಟ್ಟಿಕೊಂಡು ಎದ್ದು ಗುರುವಿನೊಡನೆ ಹೊರಟೇಹೋದ. ಆಗ ಗುರು ಶಿಷ್ಯನಿಗೆ ಹೇಳಿದ: "ನಿನ್ನ ಸ್ವಂತದವರು ಒಬ್ಬನೇ ಒಬ್ಬ—ಭಗವಂತ."

ಆದ್ದರಿಂದ ಯಾವುದರಿಂದ ಆತನ ಪಾದಪದ್ಮಗಳಲ್ಲಿ ಭಕ್ತಿಯುಂಟಾಗುವುದೋ, ಯಾವುದರಿಂದ ಆತನೇ ನನ್ನ ಸ್ವಂತದವನು ಎಂಬ ಶ್ರದ್ಧೆಭಕ್ತಿಯುಂಟಾಗುವುದೋ, ಅದನ್ನು ಮಾಡುವುದೇ ಮೇಲು. ಸಂಸಾರ ಎಂಬುದನ್ನು ನೋಡುತ್ತಿದ್ದೀಯೆ. ಎಲ್ಲಾ ಎರಡು ದಿವಸದ ವ್ಯಾಪಾರ. ಇದರಲ್ಲಿ ಏನೂ ಇಲ್ಲ.

ಪಂಡಿತ ನಗುತ್ತಾ: "ಇಲ್ಲಿಗೆ ಬಂದರೆ, ಬಂದ ದಿವಸವಂತೂ ಪೂರ್ಣ ವೈರಾಗ್ಯ ಬಂದುಬಿಡುತ್ತದೆ. ಇಚ್ಛೆ ಬರುತ್ತದೆ — ಸಂಸಾರವನ್ನು ತ್ಯಜಿಸಿ ಹೊರಟೇ ಹೋಗಿಬಿಡೋಣ ಅಂತ."

ಪರಮಹಂಸರು: "ಬೇಕಾಗಿಲ್ಲ, ತ್ಯಜಿಸಿ ಹೋಗಬೇಕಾದುದರ ಆವಶ್ಯಕತೆ ಏನಿದೆ? ನೀವು ಮಾನಸಿಕವಾಗಿ ತ್ಯಾಗ ಮಾಡಿ. ಸಂಸಾರದಲ್ಲಿ ಅನಾಸಕ್ತರಾಗಿ ಇದ್ದುಕೊಂಡಿರಿ."

**ಎತ್ತ ಹೋದರು ಸುತ್ತಲೆಲ್ಲೂ**
**ಆರಿಗಾರೂ ಇಲ್ಲ ಜಗದೊಳು**
**ಎಂಬುದನು ನೀ ನೆನಪಿಡು..**
**ಮಾಯೆಯೊಡ್ಡಿದ ಬಲೆಯೊಳಿದ್ದರೂ**
**ತಾಯ ಪಾದದಿ ಮನವಿಡು.**

ಈ ಹಾಡನ್ನು ಪರಮಹಂಸರು ತಮ್ಮ ಮಧುರ ಕಂಠದಲ್ಲಿ ಹಾಡುತ್ತಿದ್ದರು.